**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಸಿ.ಸಿ.ನಂ.884/2014**

**ಪಿ.ಡಬ್ಲ್ಯೂ: 24**
**ಸಿ.ಡಬ್ಲ್ಯೂ: 19**

**ಹೆಸರು** : ಕೇಶವಮೂರ್ತಿ
ತಂದೆಯ **ಹೆಸರು** : ರಾಮಪ್ಪ
**ವಯಸ್ಸು** : **48 ವರ್ಷ**
**ಉದ್ಯೋಗ** : ವ್ಯವಸಾಯ
**ವಾಸಸ್ಥಳ** : ದುಗ್ಲಾಪುರ, ತರೀಕೆರೆ

**ದಿನಾಂಕ: 04-12-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಿಃಡಬ್ಲ್ಯು*24* ರವರು ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಾಗಿರುತ್ತಾರೆ.

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

*2009* ರಲ್ಲಿ ನಾವು ನಮ್ಮ ಮನೆಯ ಬುನಾದಿಯನ್ನು ಹಾಕಿದ್ದೆವು. ಚಾಸಾ-*14* ಉಮೇಶ ಬಾವಿಕೆರೆಯ ಗ್ರಾಮೀಣ ಬ್ಯಾಂಕಿನಲ್ಲಿ ಹೊಸ ಮ್ಯಾನೇಜರ್ ಬಂದಿದ್ದಾರೆ, ನಿಮಗೆ ಅಕೌಂಟ್ ಓಪನ್ ಮಾಡಿಸಿಕೊಡುತ್ತೇನೆಂದು ತಿಳಿಸಿದ್ದರಿಂದ *2011* ರಲ್ಲಿ ನಾನು ಬ್ಯಾಂಕಿನಲ್ಲಿ ಖಾತೆ ತೆರೆದಿರುತ್ತೇನೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಮ್ಯಾನೇಜರ್ ಕೆಲವು ದಾಖಲೆಗಳಿಗೆ ನನ್ನ ಸಹಿಯನ್ನು ಪಡೆದರು. ನಂತರ ಚಾಸಾ-*14* ರವರು ನನಗೆ ಬ್ಯಾಂಕಿನಲ್ಲಿ ಮ್ಯಾನೇಜರ್ ಅವರು ಅವ್ಯವಹಾರ ಮಾಡಿರುತ್ತಾರೆಂದು ತಿಳಿಸಿದರು. ನಂತರ ಪೋಲೀಸರು ನನ್ನನ್ನು ಕರೆಸಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಬ್ಯಾಂಕಿನ ಮ್ಯಾನೇಜರ್ ಹೆಸರು ರವಿನಾರಾಯಣ್ ಎಂಬುದಾಗಿರುತ್ತದೆ.

**ಪಾಟೀ ಸವಾಲು : ಆರೋಪಿತರ ಪರ** ಶ್ರೀ ಎಂ ಕೆ ಟಿ **ವಕೀಲರಿಂದ**

ಬ್ಯಾಂಕಿನಲ್ಲಿ ಅವ್ಯವಹಾರ ಆಗಿದೆ ಎಂದು ಪೋಲೀಸರು ನನಗೆ ತಿಳಿಸಿದ ಮೇಲೆ ಗೊತ್ತಾಯಿತೆಂದರೆ ಸರಿ. *2011* ರಿಂದ ನಾನು ಬ್ಯಾಂಕಿನ ವ್ಯವಹಾರ ಮಾಡುತ್ತೇನೆ. ಬ್ಯಾಂಕಿನಲ್ಲಿರುವ ದಾಖಲೆಗಳನ್ನು ನಾನು ಖುದ್ದಾಗಿ ಓದಿ ನೋಡಿಲ್ಲ ಎಂದರೆ ಸರಿ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

**ಓ. ಕೇ. ಸ. ಇ. ಎ. ಒ.**

Sd/-
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**